

ಅವರಿಗೆ ಸಹಾಯ ಮಾಡುವುದರಲ್ಲಿ ಇವರೇ ಕೇರಿಗೆ ಮೊದಲಿಗರಾಗಿರುತ್ತಿದ್ದರು. ಒಬ್ಬರ ಮುಂದೆ ಕೈಚಾಚದಂತೆ ಬದುಕು ನಡೆಸುತ್ತಿದ್ದರು. ಒಟ್ಟಿನಲ್ಲಿ ಈಡು ಜೋಡು ಸರಿಯಾಗಿತ್ತು.

ಸದಾ ಬಾಳೆಯಂತೆ ಬಾಗಿಕೊಂಡು ನಡೆಯುತ್ತಿದ್ದ ಪುಟ್ಟಸ್ವಾಮಾಚಾರ್ರು ಅವರನ್ನು ನೋಡಿದ ಕೂಡಲೆ ಎಂಥವರಿಗೂ ಗೌರವ ಭಾವವೊಂದು ಮೂಡುತ್ತಿತ್ತು. ಜೊತೆಗೆ ಅವರಿಗಿದ್ದ ಸ್ವಲ್ಪಮಟ್ಟಿನ ಓದು ಮತ್ತು ಬರೆಹದ ತಿಳಿವಳಿಕೆಯು ಅವರನ್ನು ಎಲ್ಲರ ನಡುವೆ ಉನ್ನತವಾದ ಸ್ಥಾನಕ್ಕೆ ಏರಿಸಿತ್ತು. ಅವರ ಮುಖದಲ್ಲಿ ಎದ್ದುಕಾಣುತ್ತಿದ್ದ ಮೌಖಿಕ ಪರಂಪರೆಯ ವಿಶಿಷ್ಟತೆ ಮತ್ತು ಲಾಸ್ಯವಾಡುತ್ತಿದ್ದ ಸೌಮ್ಯತೆಗೆ ನಾನು ಮನಸೋತಿದ್ದೆ. ಪುಟ್ಟಸ್ವಾಮಾಚಾರ್ರು ಬಯಲಾಟದ ಹಲವಾರು ಪಠ್ಯಗಳನ್ನು ಹೃದ್ಗತ ಮಾಡಿಕೊಂಡಿದ್ದ ಶ್ರೇಷ್ಠ ಭಾಗವತರಾಗಿದ್ದರು. 'ಕರಿಭಂಟನ ಕಾಳಗ', 'ದೇವಿ ಮಹಾತ್ಮೆ', 'ದುಶ್ಶ್ಯಾಸನ ಕಾಳಗ', 'ಲವಕುಶರ ಕಾಳಗ', 'ತ್ರಿಪುರ ಸಂಹಾರ'... ಮುಂತಾದ ಬಯಲಾಟದ ಮೌಖಿಕ ಪಠ್ಯಗಳನ್ನು ತಮ್ಮ ಅಗಾಧ ನೆನಪಿನ ಶಕ್ತಿಯಿಂದ ತಮ್ಮೊಳಗೆ ಸಂಚಯಿಸಿಕೊಂಡಿದ್ದರು. ಅವರ ಚಿಂತನೆಯ ಗುಣಮಟ್ಟ ಯಾವ ಸಂಭಾಷಣೆ ಆದ ಮೇಲೆ, ಯಾವ ಮಟ್ಟು